Decree in
Original Suit
(O.20 R.6, 7)
Form No.1

# COMPROMISE DECREE

## IN THE COURT OF THE CIVIL JUDGE AND J.M.F.C. AT JAGALUR.

## O.S. NO.5/2025

**Plaintiff/s**

ಶ್ರೀ. ಬಿ.ಪಿ. ರಾಜಪ್ಪ ಬಿನ್ ಪತ್ರೆಪ್ಪ ಬಿ.
ವಯಸ್ಸು 58 ವರ್ಷ, ವ್ಯವಸಾಯ,
ವಾಸ : ಮರಿಕುಂಟೆ ಗ್ರಾಮ, ಜಗಳೂರು ತಾ, ದಾವಣಗೆರೆ ಜಿ

**V/s**

**Defendant/s**

1. ಶ್ರೀ.ಸಿ.ಡಿ.ಈಶ್ವರಪ್ಪ ಬಿನ್ ದಾನಪ್ಪ
ವಯಸ್ಸು 55 ವರ್ಷ, ವ್ಯವಸಾಯ,
ಆಧಾರ್ ನಂ.4856 6334 5542

2. ಶ್ರೀಮತಿ, ಅಂಜಿನಮ್ಮ ಕೋಂ ಸಿ.ಡಿ.ಈಶ್ವರಪ್ಪ
ವಯಸ್ಸು 50 ವರ್ಷ, ಗೃಹಿಣಿ,
ಆಧಾರ್ ನಂ.2318 6132 5747
ಇಬ್ಬರ ವಾಸಃ ಮರಿಕುಂಟೆ ಗ್ರಾಮ,
ಜಗಳೂರು ತಾ, ದಾವಣಗೆರೆ ಜಿ.

3. ಶ್ರೀಮತಿ. ಶೃತಿ.ಸಿ.ಇ. ಕೋಂ ಚನ್ನಬಸಪ್ಪ ಬಿ.ಕೆ.
ವಯಸ್ಸು 30 ವರ್ಷ, ಗೃಹಿಣಿ,
ವಾಸಃ ಬಸವನಾಳ್ ಗ್ರಾಮ,
ದಾವಣಗೆರೆ ತಾ ಮತ್ತು ಜಿಲ್ಲೆ.
ಆಧಾರ್ ನಂ.8005 6403 1721

4 . ಶ್ರೀಮತಿ.ರೇಖ ಸಿ. ಇ ಕೋಂ ಸಿದ್ದಲಿಂಗಪ್ಪ ಎಸ್
ವಯಸ್ಸು 28 ವರ್ಷ ಗೃಹಿಣಿ,
ವಾಸಃ#3316/2 4 ನೇ ಮೇನ್, 6 ನೇ ಕ್ರಾಸ್
ಎಂ.ಸಿ.ಸಿ.'ಬಿ' ಬ್ಲಾಕ್ ದಾವಣಗೆರೆ
ಆಧಾರ್ ನಂ.2614 2507 8526

**SUIT FILED ON : 15.01.2025**
**SUIT DISPOSED ON : 13.03.2026.**

ಪ್ರಾರ್ಥನೆಃ-

ಆದ್ದರಿಂದ ಘನ ಗೌರವಾನ್ವಿತ ನ್ಯಾಯಾಲಯದಲ್ಲಿ ವಾದಿಯು ವಿನಯ ಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುವುದೇನೆಂದರೆಃ-

1. ಘನ ನ್ಯಾಯಾಲಯವು ಪ್ರತಿವಾದಿಯರು ವಾದಿಗೆ ದಿನಾಂಕಃ22.12.2023 ರಂದು ಸಾಕ್ಷಿಗಳ ಸಮಕ್ಷಮ ಕ್ರಯದ ಕರಾರಿನಲ್ಲಿಯ ಷರತ್ತುಗಳಿಗೊಳಪಟ್ಟು ಬರೆದು ನೊಂದಾಯಿಸಕೊಟ್ಟ ಕ್ರಯದ ಕರಾರಿಗನುಗುಣವಾಗಿ ವಾದಿಯ ಹೆಸರಿಗೆ ನೊಂದಾಯಿಸಿಕೊಡುವಂತೆ ಆದೇಶಿಸಬೇಕೆಂದು ಮತ್ತು ಪ್ರತಿವಾದಿಯರ ಪರವಾಗಿ ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡಿ ವಾದಿಯ

ಹೆಸರಿಗೆ ನೊಂದಾಯಿಸಿ ವಾದಿಗೆ ಸ್ವಾಧೀನಕ್ಕೆ ಬಿಟ್ಟುಕೊಡುವಂತೆ ಆದೇಶಿಸಬೇಕೆಂದು, ಮತ್ತು ವಾದಿಯು ಪ್ರತಿವಾದಿಯರಿಗೆ ಕೊಡಬೇಕಾದ ಬಾಕೀ ಹಣ ರೂ.25000-00/- ಗಳನ್ನು ವಾದಿಯು ನ್ಯಾಯಾಲಯದಲ್ಲಿ ಠೇವಣಿ ಇಡಲು ಆದೇಶಿಸಿ ವಾದಿಯ ಪರವಾಗಿ ಮತ್ತು ಪ್ರತಿವಾದಿಯರ ವಿರುದ್ಧವಾಗಿ ಜಡ್ಜ್ ಮೆಂಟ್ ಮತ್ತು ಡಿಕ್ರಿ ಮಾಡಿ ಆದೇಶಿಸಬೇಕೆಂದು.

2. ನ್ಯಾಯಾಲಯಕ್ಕೆ ಯುಕ್ತವೆಂದು ತೋರುವ ಇತರ ಪರಿಹಾರಗಳನ್ನು ವಾದಿಯು ಪ್ರತಿವಾದಿಯರಿಂದ ಹೊಂದುವಂತೆ ಆದೇಶ ಮಾಡಬೇಕಾಗಿ ನ್ಯಾಯ ಮತ್ತು ಸಮಾನತೆಯ ಹಿತಿ ದೃಷ್ಟಿಯಿಂದ ಪ್ರಾರ್ಥನೆ.

This suit is coming on this the 13th day of March 2026 for final disposal before Sri. Chethan R., Civil Judge & J.M.F.C. Jagalur in the presence of Sri.S.S.K., advocate for plaintiff and Sri.K.V.R., advocate for defendant No.1 to 4

**By Order,**

**The application filed under Order XXIII Rule 3 CPC is allowed.**

**The suit is decreed as per terms of Compromise Petition.**

<u>ದಿವಾನಿ ಪ್ರಕ್ರಿಯಾ ಸಂಹಿತೆ **1908** ಆದೇಶ **23** ನಿಯಮ **3** ರ ಅಡಿಯಲ್ಲಿ ವಾದಿ ಮತ್ತು ಪ್ರತಿವಾದಿಗಳು ಸಲ್ಲಿಸಿದ ಜಂಟಿ ರಾಜಿ ಅರ್ಜಿ</u>

ವಾದಿ ಮತ್ತು ಪ್ರತಿವಾದಿಗಳು ಘನ ನ್ಯಾಯಾಲಯದ ಮುಂದೆ ವಿನಂಭವಾಗಿ ಪ್ರಾರ್ಥಿಸಿಕೊಳ್ಳುವುದೆನೆಂದರೆ:-

ವಾದಿ ಮತ್ತು ಪ್ರತಿವಾದಿಗಳು ದಿನಾಂಕ 22/12/2023 ರಂದು ಜಗಳೂರು ತಾಲ್ಲೂಕ್ ಸಬ್-ರಿಜಿಸ್ಟ್ರರ್ ರವರ ಕಛೇರಿಯಲ್ಲಿ ದಾವಾ ಷೆಡ್ಯೂಲ್ ಸ್ವತ್ತನ್ನು 3,50,000/- ರೂ ಗಳಿಗೆ ಸ್ವಾಧೀನ ರಹಿತ ಕ್ರಯದ ಕರಾರು ಒಪ್ಪಂದ ಮಾಡಿಕೊಂಡಿದ್ದು ಸದರಿ ಒಪ್ಪಂದ ಪತ್ರವು ಜಗಳೂರು ಉಪನೊಂದಣಾಧಿಕಾರಿಗಳ ಕಛೇರಿಯ 1 ಪುಸ್ತಕದ ದಸ್ತಾವೇಜು ಸಂಖ್ಯೆ ಜೆಜಿಎಲ್-01-03678-2023-24 ದಿನಾಂಕ 05/01/2024 ರಂದು ನೊಂದಾಯಿಸಿ ವಿದ್ಯುನ್ಮಾನ ದತ್ತಾಂಶದಲ್ಲಿ ಶೇಖರಿಸಿಡಲಾಗಿದೆ.

ಸದರಿ ಕ್ರಯದ ಕರಾರು ಒಪ್ಪಂದಕ್ಕೆ ಸಂಬಂಧಿಸಿದಂತೆ ವಾದಿಯು ಪ್ರತಿವಾದಿಗಳ ವಿರುದ್ಧ ಸದರಿ ಕ್ರಯದ ಕರಾರು ಪತ್ರದ ಅನುಷ್ಠಾನಕ್ಕಾಗಿ ದಾವೆ ಹೂಡಿದ್ದು ಇರುತ್ತದೆ. ಸದರಿ ದಾವೆಯಲ್ಲಿ ಪ್ರತವಾದಿಗಳು ತಮ್ಮ ವಕೀಲರ ಮೂಲಕ ಹಾಜರಾಗಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳು ಪರಸ್ಪರ ರಾಜಿ ಮಾಡಿಕೊಂಡು ಸದರಿ ದಾವೆಯನ್ನು ಇತ್ಯರ್ಥ ಪಡಿಸಿಕೊಳ್ಳಲು ಮುಂದಾಗಿದ್ದು ಸದರಿ ದಾವೆಯ ಕೆಳಕಂಡ ಷರತ್ತುಗಳೊಂದಿಗೆ ವಾದಿ ಪ್ರತಿವಾದಿಯರು ಸದರಿ ರಾಜಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಪ್ರತಿವಾದಿಯರು ವಾದಿಯ ಹೆಸರಿಗೆ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ದಾವಾ ಸ್ವತ್ತನ್ನು ದಿನಾಂಕ 22/12/2023 ರಂದು 3.50.000/- (ಮೂರು ಲಕ್ಷದ ಐವತ್ತು ಸಾವಿರ) ರೂಪಾಯಿಗಳಿಗೆ ಬರೆದುಕೊಟ್ಟ ಸ್ವಾಧೀನ ರಹಿತ ಕ್ರಯದ ಕರಾರು ಪತ್ರದ ಒಪ್ಪಂದದಂತೆ ವಾದಿಯು ತನ್ನ ಹೆಸರಿಗೆ ಸಂಪೂರ್ಣ ಕ್ರಯ ಪತ್ರದ ಮೂಲಕ ನೊಂದಾಣಿಮಾಡಿಕೊಡಲು ಪ್ರತಿವಾದಿಯರು ಒಪ್ಪಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಪೋಡಿ ಕಾರ್ಯ ಮತ್ತು 11-ಇ ನಕ್ಷೆ ಮಾಡಿಸಿಕೊಂಡು ವಾದಿಯು ದಾವಾ ಷೆಡ್ಯೂಲ್ ಸ್ವತ್ತಿನ ನೊಂದಾಣಿಗೆ ಕರೆದ ತಕ್ಷಣ ಯಾವೂದೆ ಸಬೂಬು ಹೇಳದೆ ನೊಂದಣಿ ಮಾಡಿಸಿಕೊಡಲು ಪ್ರತಿವಾದಿಯರು ಸಿದ್ದರಿರುತ್ತಾರೆ.

ಸದರಿ ದಾವಾ ಪೆಡೂಲ್ ಸ್ವತ್ತಿಗೆ ಸಂಬಂಧಿಸಿದಂತೆ ವಾದಿಯ ಹೆಸರಿಗೆ ನೊಂದಾಣಿ ಪತ್ರ ಹಾಗೂ ಹಕ್ಕು ವರ್ಗಾವಣೆ ಮಾಡಿಸೊಕೊಳ್ಳಲು ಪ್ರತಿವಾದಿಯರು ಯಾವುದೇ ತಂಟೆ ತಕರಾರು ಮಾಡದೆ ಒಪ್ಪಿಕೊಂಡು ಕರೆದಾಗ ಸಹಿಮಾಡಲು ಪ್ರತಿವಾದಿಯರು ಒಪ್ಪಿರುತ್ತಾರೆ.

ಸದರಿ ಸ್ವಾಧೀನ ರಹಿತ ಕ್ರಯದ ಕರಾರು ಪತ್ರದ ಒಪ್ಪಂದಂತೆ ಪ್ರತಿವಾದಿಯರು ಸದರಿ ಪತ್ರದ ನೊಂದಾಣಿ ದಿನಾಂಕದಂದು 3,25,000/- ರೂಗಳನ್ನು ನಗದಾಗಿ ಪಡೆದುಕೊಂಡಿರುತ್ತೇವೆ. ಬಾಕಿ ಉಳಿದ 25.000/- ರೂಪಾಯಿಗಳನ್ನು ಜಗಳೂರು ತಾಲ್ಲೂಕ್ ಬಿಳಿಚೋಡು ಹೋಬಳಿ ಪಲ್ಲಾಗಟ್ಟೆ ಗ್ರಾಮದ ಪ್ರಗತಿ ಗ್ರಾಮೀಣ ಬ್ಯಾಂಕ್ ನ ಚೆಕ್ ನಂ:01012, ದಿನಾಂಕ:03/03/2026, 25,000/- ರೂಗಳನ್ನು ಪ್ರತಿವಾದಿಯರು ಈ ದಿನ ಪಡೆದುಕೊಂಡಿರುತ್ತಾರೆ, ಇನ್ನೂಮುಂದೆ ವಾದಿ ಮತ್ತು ಪ್ರತಿವಾದಿಯರಿಗೆ ಸದರಿ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯಾದ ಹಣಕಾಸು ವ್ಯವಹಾರ ಇರುವುದಿಲ್ಲ. ವಾದಿಯು ಸದರಿ ದಾವಾ ಷೆಡ್ಯೂಲ್ ಸ್ವತ್ತಿನ ಪೋಡಿ ಮತ್ತು 11-ಇ ನಕ್ಷೆ ತಯಾರು ಮಾಡಿಸಿಕೊಂಡು ಬಂದಾಗ ಪ್ರತಿವಾದಿಯರು ಯಾವುದೇ ಸಬೂಬು ಹೇಳದೇ ವಾದಿಯ ಹೆಸರಿಗೆ ಶದ್ದ ಕ್ರಯ ಪತ್ರ ಮಾಡಿಕೊಡಲು ಪ್ರತಿವಾದಿಗಳು ಒಪ್ಪಿರುತ್ತಾರೆ. ಅಥವಾ ವಾದಿಯು ಕಾನೂನು ರೀತಿ ನೇರವಾಗಿ ಘನ ನ್ಯಾಯಾಯದ ಆದೇಶದ ಮೇರೆಗೆ ಶುದ್ಧ ಕ್ರಯದ ಕರಾರು ಪತ್ರವನ್ನು ಮಾಡಿಸಿಕೊಳ್ಳಲು ಪ್ರತಿವಾದಿಗಳು ಒಪ್ಪಿಕೊಂಡಿರುತ್ತಾರೆ.

ದಾವಾ ಷೆಡ್ಯೂಲ್ ಸ್ವತ್ತನ್ನು ಪ್ರತಿವಾದಿಗಳು ಈ ದಿನವೇ ವಾದಿಯ ವಶಕ್ಕೆ ಬಿಟ್ಟುಕೊಟ್ಟು ಬಾಕಿ 25,000/- ರೂಗಳನ್ನು ಪ್ರಗತಿ ಗ್ರಾಮೀಣ ಬ್ಯಾಂಕ್ ಪಲ್ಲಾಗಟ್ಟೆ ಶಾಖೆಯ ಚೆಕ್ ಮೂಲಕ ಪ್ರತಿವಾದಿಗಳು ಪಡೆದುಕೊಂಡಿರುತ್ತಾರೆ. ಸದರಿ ಚೆಕ್ ನಂ 010128 ದಿನಾಂಕ:03/03/2026.

ವಾದಿಯೂ ಇನ್ನೂಮುಂದೆ ದಾವಾ ಷೆಡ್ಯೂಲ್ ಸ್ವತ್ತನ್ನು ತನ್ನ ಹೆಸರಿಗೆ ಕ್ರಯದ ನೊಂದಾಣಿ ಮಾಡಿಸಿಕೊಂಡು ಖಾತೆ ವರ್ಗಾವಣೆ ಮಾಡಿಕೊಂಡು ಈ ದಿನವೇ ಸದರಿ ದಾವಾ ಷೆಡ್ಯೂಲ್ ಸ್ವತ್ತಿನ ಸ್ವಾಧೀನಾನುಭವ ಪಡೆದುಕೊಂಡಿರುತ್ತಾರೆ. ಇನ್ನೂಮುಂದೆ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಸಿಗಬಹುದಾದ ನಿಧಿ-ನಿಕ್ಷೆಪ, ಜಲ-ತರುಗಳಾದಿ ವಾದಿಗೆ ಸೇರತಕ್ಕದ್ದು, ಹಾಗೂ ವಾದಿಯು ದಾವಾ ಷೆಡ್ಯೂಲ್ ಸ್ವತ್ತನ್ನು

ಕ್ರಯ, ಬೋಗ್ಯ ಧಾನ ಇತ್ಯಾದಿಯಾಗಿ ಪರಭಾರೆ ಮಾಡಲು ವಾದಿಯು ಹಕ್ಕುಳ್ಳವನಾಗಿರುತ್ತಾನೆ ಸದರಿ ಷರತ್ತುಗಳಿಗೆ ಉಭಯ ಪಕ್ಷಗಾರರು ಒಪ್ಪಿ ಈ ಕೆಳಗೆ ಸಹಿ ಮಾಡಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳು ರಾಜಿ ಮಾಡಿಕೊಂಡಿರುವ ದಾವಾ ಷೆಡ್ಯೂಲ್ ಸ್ವತ್ತು ಜಗಳೂರು ತಾಲ್ಲೂಕು ಬಿಳಿಚೋಡು ಹೋಬಳಿ ಕಮಲಾಪುರ ಗ್ರಾಮದ ಹಳೆ ರೀ ಸರ್ವೆ ನಂ 25 ಇದ್ದು ಹೊಸ ಕಂದಾಯ ಗ್ರಾಮ ಕಮಲಾಪುರದ ರಿ.ಸರ್ವೆ ನಂ 1 ರಲ್ಲಿ ಬರುವ ವಿಸ್ತೀರ್ಣ ಎಕರೆ 2 ಗುಂಟೆ 00 ಆಕಾರ್ 22 ರೂಪಾಯಿ 87 ಪೈಸೆಯುಳ್ಳ ಸ್ವತ್ತಿನಲ್ಲಿ ಬರುವ 2 ಎಕರೆ ಜಮೀನಿಗೆ ಚೆಕ್ಕುಬಂದಿ: -ಪೂರ್ವಕ್ಕೆ:ಜಿ.ಎಲ್.ಸುಮಲತ ಇವರ ಜಮೀನು, ಪಶ್ಚಿಮಕ್ಕೆ:ಮಂಜಮ್ಮನವರ ಜಮೀನು, ಉತ್ತರಕ್ಕೆ: ಬಿ.ಪತ್ರೆಪ್ಪ ಸಂಕಪ್ಪ ಇವರುಗಳ ಜಮೀನು, ದಕ್ಷಿಣಕ್ಕೆ: ಸಿ.ಹನುಮಂತಪ್ಪ ಇವರ ಜಮೀನು ಈ ಮಧ್ಯದ ಸ್ವತ್ತು ದಾವಾ ಷೆಡ್ಯೂಲ್ ಸ್ವತ್ತಾಗಿದ್ದು ಸದರಿ ಸ್ವತ್ತಿನಲ್ಲಿ ಉಭಯತರರು ಮೇಲ್ಕಂಡಂತೆ ರಾಜಿ ಸಂಧಾನದ ಮಾಡಿಕೊಂಡಿರುತ್ತಾರೆ.

ಆದುದ್ದರಿಂದ ಮೇಲ್ಕಂಡಂತೆ ವಾದಿ ಮತ್ತು ಪ್ರತಿವಾದಿಗಳು ಪರಸ್ಪರ ರಾಜಿ ಸಂಧಾನ ಮಾಡಿಕೊಂಡು ಸದರಿ ರಾಜಿ ಅರ್ಜಿಗೆ ಸಹಿ ಮಾಡಿರುತ್ತಾರೆ.

The Compromise Petition filed in this case is part of this decree.

Given under my hand and the seal of the Court, this the 13th day of March-2026.

sd

Civil Judge & J.M.F.C.
Jagalur.

**MEMORANDUM OF COSTS**

| | **Plaintiff** | **Defendants** |
|---|---|---|
| Court Fee paid on Plaint | 23625-00 | - |
| b) Court Fee on IA | -- | -- |
| c) Vakalath | filed | filed |
| d) Process Fee | 10-00 | -- |
| e) Adv. fee (F.C. not filed) | -- | -- |
| **TOTAL ::** | **23635-00** | **--** |

sd

Civil Judge & J.M.F.C.
Jagalur.

<u>ದಾವ ಷೆಡ್ಯೂಲ್ ಸ್ವತ್ತಿನ ವಿವರ</u>

ದಾವಣಗೆರೆ ಜಿಲ್ಲಾ ಜಗಳೂರು ತಾಲ್ಲೂಕ್ ಸಬ್ ರಿಜಿಸ್ಟ್ರಾರ್ ರವರ ಅಧಿಕಾರ ವ್ಯಾಪ್ತಿಗೆ ಒಳಪಟ್ಟ, ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕ್ ಬಿಳಿಚೋಡು ಹೋಬಳಿ, ಕಮಲಾಪುರ ಗ್ರಾಮಕ್ಕೆ ಸೇರಿದ ರೀ ಸರ್ವೆ ನಂ.1 ಪೈಕಿ (ಈ ಹಿಂದೆ ಮರಿಕುಂಟೆ ಗ್ರಾಮಕ್ಕೆ ಸೇರಿದ ರಿ.ಸ.ನಂ25/1 ರ ಪೈಕಿ ಇದ್ದು) ಇದರ ವಿಸ್ತೀರ್ಣ 02-00 ಎಕರೆ (ಎರಡು ಎಕರೆ ಗುಂಟೆ ಇಲ್ಲ) ಆಕಾರ ದಮಾಸ ಮೇರೆ ಹಾಗುವ ಖುಷ್ಕಿ ಜಮೀನಿಗೆ ಚಕ್ಕುಬಂದಿಃ-

| | | |
|---|---|---|
| ಪೂರ್ವಕ್ಕೆ | : | ಜಿ. ಎಲ್. ಸುಮತಲಾ ಇವರ ಜಮೀನು |
| ಪಶ್ಚಿಮಕ್ಕೆ | : | ಮಂಜಮ್ಮನವರ ಜಮೀನು |
| ಉತ್ತರಕ್ಕೆ | : | ಬಿ.ಪತ್ರೆಪ್ಪ, ಸಂಕಪ್ಪ, ಮುರಿಗೆಪ್ಪ ಇವರುಗಳ ಜಮೀನು |
| ದಕ್ಷಿಣಕ್ಕೆ | : | ಸಿ. ಹನುಮಂತಪ್ಪನವರ ಜಮೀನು ಈ ಮದ್ಯದ ಇರತಕ್ಕ ಖುಷ್ಕಿ ಜಮೀನು |

Draft Decree notified on:20.03.2026.
Decree signed on :24.03.2026

sd

**Civil Judge & J.M.F.C.**
**Jagalur.**

***